
ಗಾಳಿಯನ್ನೇ ಕೆಲಸಕ್ಕೆ ಹಚ್ಚಿದ ‘ಹೀರೋ’ ಹುಡುಗ, ವಿಲಿಯಮ್ ಕಂಕ್ವಾಂಬಾನ ಕತೆ



ಕನ್ನಡಕ್ಕೆ:
ಪ್ರಭಾಕರ ನಾನಾವಟಿ




ಆಫ್ರಿಕಾ ಖಂಡದಲ್ಲಿಯ ಮಾಲಾವಿ ದೇಶದಲ್ಲಿಯ ವಿಂಬೆ ಎಂಬ ಒಂದು ಚಿಕ್ಕ ಹಳ್ಳಿಯಲ್ಲಿಯ ಒಕ್ಕಲು ಜನರ ಹತ್ತಿರ ಸಂಜೆಯಾದ ಕೂಡಲೇ ದೀಪ ಹೊತ್ತಿಸಿ ಮನೆ ಬೆಳಗಿಸಲು ಹಣವಿಲ್ಲದ್ದರಿಂದ ಎಲ್ಲರೂ ರಾತ್ರಿಯ ಬದಲು ಸಂಜೆಯ ವೇಳೆಗೆ ಹಾಸಿಗೆಯನ್ನು ಸೇರಿ ಗಡದ್ದಾಗಿ ಮಲಗಿ ಬಿಡುತ್ತಿದ್ದರು. ಆದರೆ ವಿಲಿಯಮ್ ಮಾತ್ರ ಈ ಕತ್ತಲಲ್ಲಿ ಕನಸು ಕಾಣುತ್ತಿದ್ದ.






ಆತನಿಗೆ ಏನಾದರೂ ಜೋಡಿಸುವದರಲ್ಲಿ, ಜೋಡಿಸಿದ್ದನ್ನು ಬಿಚ್ಚಿಡುವದರಲ್ಲಿ ಸಾಕಷ್ಟು ಆಸಕ್ತಿ. ಬಾಟಲಿಗಳ ಮುಚ್ಚಳದಿಂದ ಮಾಡಿದ ಗಾಲಿಗಳ ಆಟಿಗೆಯ ಟ್ರಕ್ ನ್ನು ಇಲ್ಲವೆ ರೇಡಿಯೋವನ್ನು ಬಿಡಿ ಬಿಡಿ ಮಾಡಿ ನೋಡುತ್ತಿದ್ದ. ರೇಡಿಯೋವನ್ನು ಬಿಚ್ಚಿಟ್ಟನಂತರ ಇದರಲ್ಲಿಯ ಹಾಡುಗಳೆಲ್ಲ ಎಲ್ಲಿ ಮಾಯವಾದವು ಎಂದು ಆಶ್ಚರ್ಯಪಡುತ್ತಿದ್ದ.




ಆತನ ಅಜ್ಜ ಹೇಳಿದ ಕತೆಗಳಲ್ಲಿಯ ಮಾಟಗಾರನು ಕತ್ತಲು ಕವಿದ ಕೋಣೆಯಲ್ಲಿ ಬಂದು ಕಿವಿಯಲ್ಲಿ ಏನೋ ಹೇಳುತ್ತಿದ್ದನು. ವಿಮಾನದಲ್ಲಿ ಕುಳಿತು ಬಂದ ದೆವ್ವಗಳು ಗಾಳಿಯ ಹಾಗೆ ಮುಚ್ಚಿದ ಬಾಗಿಲು- ಕಿಂಡಿಗಳಿಂದ ಹಾಯ್ದು ಮನೆಯೊಳಗೆ ಬರುತ್ತಿದ್ದವು. ನೂರಾರು ಜನರು ಮೈಯಲ್ಲಿ ಇದ್ದಂತೆ ಭೂತವು ಕುಣಿಯುತ್ತಿತ್ತು. ಈ ಕತೆಗಳನ್ನು ಕೇಳುವಾಗ ವಿಲಿಯಮ್ ಗೆ ಬಹು ಆಶ್ಚರ್ಯವಾಗುತ್ತಿತ್ತು. ಮಳೆ ಬೀಳಲೆಂದು ಚಿತ್ರ-ವಿಚಿತ್ರ ಅರಿವೆ ಮತ್ತು ಮುಖವಾಡ ಧರಿಸಿ ಕೆಲ ಜನರು ಮಳೆಯ ಪ್ರಾರ್ಥನೆ ಮಾಡುತ್ತಿದ್ದರು.






ಮುಂಜಾವಿನಲ್ಲಿ ಹೊಲಗಳಲ್ಲಿ ನಡೆದಾಡಿದಾಗ ಸುತ್ತಲು ಬೆಳೆದ ಜೋಳದ ತೆನೆಗಳನ್ನು ಕಂಡು ಅವನಿಗೆ ಬಹಳ ಆಶ್ಚರ್ಯವಾಗುತ್ತಿತ್ತು. ದಾರಿಯಲ್ಲಿ ಭರ್‍ರನೆ ಓಡುವ ಟ್ರಕ್ ಗಳ ರಭಸ ಕಂಡು ಅವನಿಗೆ ಸೋಜಿಗವಾಗುತ್ತಿತ್ತು.
ಇಂಜಿನು ಟ್ರಕ್ ನ್ನು ಹೇಗೆ ಓಡಿಸುತ್ತದೆ?
“ಗುದ್ದಲಿಯನ್ನು ಸರಿಯಾಗಿ ಹಿಡಿ. ಇಲ್ಲವಾದರೆ ಕಾಲು ಮೇಲೆ ಬಿದ್ದು ಗಾಯವಾದೀತು.” ತಂದೆಯ ಗದ್ದರಿಕೆ ಕೇಳಿದಾಗ ಆತನಿಗೆ ಹಗಲುಗನಸಿನಿಂದ ಎಚ್ಚರವಾಗುತ್ತಿತ್ತು.


ಅಜ್ಜ ಹೇಳಿದ ಕತೆಗಳಲ್ಲಿಯ ಇಷ್ಟೆಲ್ಲ ದೆವ್ವಗಳ ಕುಣಿತ ಮತ್ತು ಮಾಟಗಾರನ ಹಾರಾಟ, ಮತ್ತು ಮುಖವಾಡ ಧರಿಸಿದವರ ಪ್ರಾರ್ಥನೆ ಮಳೆಯನ್ನು ತರಲಾರವು, ಎಂಬುದು ಖಚಿತವಾಯಿತು. ಒಂದು ಹನಿ ನೀರೇ ಇಲ್ಲದ ಹಳ್ಳಿಯಲ್ಲಿಯ ಉರಿಬಿಸಿಲು ಜೋಳದ ತೆನೆಗಳನ್ನು ಪುಡಿ ಪುಡಿ ಮಾಡಿ ನೆಲಪಾಲು ಮಾಡುತ್ತಿತ್ತು. ತಿನ್ನಲು ಧಾನ್ಯಗಳಿಲ್ಲದೆ ಮಾಲಾವಿಯಲ್ಲಿಯ ಆ ಹಳ್ಳಿ ಹಸಿವಿನಿಂದ ಬಳಲುತ್ತಿತ್ತು.







ವಿಲಿಯಮ್ ನ ತಂದೆ ಎಲ್ಲ ಮಕ್ಕಳನ್ನು ಕರೆದು "ಇಂದಿನಿಂದ ನಾವೆಲ್ಲರು ದಿನಕ್ಕೆ ಒಂದೇ ಸಲ ಊಟ ಮಾಡುವ. ಇದರಿಂದ ಹೆಚ್ಚು ಕಾಲ ಧಾನ್ಯ ಉಳಿಯಬಹುದು. " ಎಂದು ಹೇಳಿದರು.
ಸಂಜೆಯಾದಾಗ ಲಾಲಟೇನ್ ಮುಂದೆ ಕುಳಿತು ಅರೆಹೊಟ್ಟೆ ತುಂಬಲು ಏನನ್ನೋ ತಿನ್ನುತ್ತಿದ್ದಾಗ ಪಿಶಾಚಿಗಳಂತೆ ಅಡ್ಡಾಡುವ ಜನರನ್ನು ಮಕ್ಕಳು ನೋಡುತ್ತಿದ್ದರು.



ಮಳೆಯಂತೆಯೇ ಕೈಯಲ್ಲಿಯ ಕಾಸೆಲ್ಲ ಮಾಯವಾಯಿತು.
ವಿಲಿಯಮ್ ನ ತಂದೆ, ಪಿಪಾನಿ, "ಮಕ್ಕಳೇ, ಕ್ಷಮಿಸಿ, ನಿಮಗೆ ಶಾಲೆಗೆ ಕಳಿಸುವಷ್ಟು ನನ್ನ ಹತ್ತಿರ ಹಣವಿಲ್ಲ. ಆದ್ದರಿಂದ ನೀವು ಶಾಲೆಗೆ ಹೋಗಬೇಡಿ. " ಎಂದು ಅಳುದನಿಯಲ್ಲಿ ಹೇಳಿದರು.
ಶಾಲೆಗೆ ಹೋಗುವ ಗೆಳೆಯರನ್ನು ಆತನು ನೋಡುತ್ತ ಕುಳಿತನು. ಅವರೆಲ್ಲ ತೇರ್ಗಡೆಯಾಗಿ ಮುಂದಿನ ವರ್ಗಕ್ಕೆ ಹೋಗುವರು. ಈತ ಮಾತ್ರ ಹೊಟ್ಟೆಯಲ್ಲಿಯ ಹಸಿವಿನಿಂದ ಮತ್ತು ಗಂಟಲಲ್ಲಿಯ ಬಾಯಾರಿಕೆಯಿಂದ ಬಳಲುತ್ತಿದ್ದ. ಮಾವಿನ ಗಿಡದ ಕೆಳಗೆ ಕುಳಿತು ವೇಳೆಯನ್ನು ಹಾಳು ಮಾಡುತ್ತಿದ್ದಾಗ ಅವನಿಗೆ ದಾರಿಯಲ್ಲಿದ್ದ ಲಾಯಬ್ರರಿಯ ನೆನಪಾಯಿತು. ಈ ಲಾಯಬ್ರರಿ ಉದಾರ ಅಮೇರಿಕೆಯು ಆ ಹಳ್ಳಿಗೆ ಕೊಟ್ಟ ಕಾಣಿಕೆ.

ಅಲ್ಲಿ ಆತನಿಗೆ ಬಣ್ಣ-ಬಣ್ಣದ ಆಕೃತಿ-ಚಿತ್ರಗಳಿದ್ದ ವಿಜ್ಞಾನದ ಪುಸ್ತಕಗಳು ಓದಲಿಕ್ಕೆ ದೊರೆತವು. ಅಲ್ಲಿಯೇ ಮಗ್ಗುಲಲ್ಲಿ ಶಬ್ದಾರ್ಥಗಳನ್ನು ಹೇಳುವ ನಿಘಂಟುಗಳು ಕೂಡ ಇದ್ದವು. ವಿಲಿಯಮ್ ನು ದೊಡ್ಡ ಟ್ರಕ್ಕುಗಳ ಇಂಜಿನು ಹೇಗೆ ಚಲಿಸುತ್ತದೆ ಮತ್ತು ರೇಡಿಯೋ ಅವಕಾಶದಿಂದ ಹಾಡುಗಳನ್ನು ಹೇಗೆ ಬಿತ್ತರಿಸುತ್ತದೆ ಎಂಬುದನ್ನು ತಿಳಿದುಕೊಂಡನು. ಆದರೆ ಎಲ್ಲಕ್ಕಿಂತ ಗಿಡದೆತ್ತರದ ಮತ್ತು ಫ್ಯಾನಿನ ಬ್ಲೇಡಗಳನ್ನು ಹಚ್ಚಿದ ಇಂಜಿನಿನ ದೊಡ್ಡ ಚಿತ್ರವು ಅವನ ಮನಸ್ಸನ್ನು ಸೆಳೆಯಿತು.







ಇದೆಂತಹ ಪಿನ್ ಚಕ್ರ? ಇದೇನು ಮಾಟವೋ? ಎಂದಂದುಕೊಂಡನು.



ಮೆಲ್ಲ-ಮೆಲ್ಲನೆ ಇದು ಗಾಳಿಯಂತ್ರವಿದ್ದು ವಿದ್ಯುತ್ತನ್ನು ನಿರ್ಮಿಸುತ್ತದೆ ಮತ್ತು ಪಂಪಿಗೆ ಜೋಡಿಸಿದರೆ ಬಾವಿಯ ಆಳದಲ್ಲಿಯ ನೀರನ್ನು ಮೇಲೆತ್ತುತ್ತದೆ ಎಂಬುದು ಅವನಿಗೆ ಹೊಳೆಯಿತು.



ಆತ ಕಣ್ಣು ಮುಚ್ಚಿ ತನ್ನ ಮನೆ
ಎದುರಿಗೇನೆ ಗಾಳಿಯಂತ್ರವಿದ್ದು
ಸುತ್ತಲು ಬೀಸುವ ಗಾಳಿಯಿಂದ
ವಿದ್ಯುತ್ತನ್ನು ನಿರ್ಮಿಸಿ ಕತ್ತಲು
ತುಂಬಿದ ಇಡಿ ಕೊಳ್ಳವನ್ನೇ
ಝುಗಝುಗಿಸುವ
ವಿದ್ಯುದ್ದೀಪಗಳಿಂದ ಬೆಳಗಿಸುತ್ತದೆ,
ಎಂಬ ದೃಶ್ಯವನ್ನು
ಕಲ್ಪಿಸಿಕೊಂಡನು.



ಇದೇ ಯಂತ್ರವು ಭೂಮಿಯ ಆಳದಲ್ಲಿರುವ ತಂಪು ನೀರನ್ನು ಊಳುವ ಭೂಮಿಯ ಮೇಲೆ ತಂದು ಕಾರಂಜಿಯಂತೆ ಎಲ್ಲ ಕಡೆ ಹನಿಸಿ ನಾಲ್ಕಾರು ಅಡಿ ಎತ್ತರದ ಜೋಳದ ತೆನೆಗಳನ್ನು ಬೆಳೆಸಿ ಭೂಮಿಯನ್ನೆಲ್ಲ , ಹಸಿರು ಮಾಡುತ್ತದೆಂಬ ಕನಸು ಕಾಣತೊಡಗಿದನು. ಆದ್ದರಿಂದ ಹಳ್ಳಿಯವರೆಲ್ಲರ ಮಳೆರಾಯನ ಪ್ರಾರ್ಥನೆಯ ಅವಶ್ಯಕತೆ ಇಲ್ಲ. ಈ ಗಾಳಿಯಂತ್ರ ಉಳಿದ ಯಾವದೇ ಯಂತ್ರಕ್ಕಿಂತ ಮೇಲು.

ಇದು ಹಸಿವೆಯನ್ನು ದೂರವಿರಿಸುವ ಆಯುಧ. !




" ನಾನು ವಿದ್ಯುತ್ ಗಾಳಿಯಂತ್ರ
ತಯಾರಿಸುವೆ,"
ಅವನು ತನ್ನಷ್ಟಕ್ಕೆ ತಾನೇ ನಿರ್ಧರಿಸಿದನು.

ಹಾಳುಪಾಳು ಸಾಮಗ್ರಿಗಳನ್ನಿಟ್ಟ ಅಂಗಳದಲ್ಲಿಯ ಕಾರು ಟ್ರಕ್ಕು ಮತ್ತು ಟ್ರಾಕ್ಟರಗಳ ಬಿಡಿ ಭಾಗಗಳು ಎತ್ತರದ ಹುಲ್ಲಿನಲ್ಲಿ ಜಂಗು ಕಟ್ಟಿ ಮಣ್ಣಿನಲ್ಲಿ ಹೂತುಗೊಂಡು ಹಾಳಾಗುತ್ತಿದ್ದವು. ಸ್ವಲ್ಪ ಹಡ್ಡಿ ನೋಡಿದಾಗ ಅಲ್ಲಿ ಆತನಿಗೆ ಟ್ರ್ಯಾಕ್ಟರದ ಇಂಜಿನ್ನಿನ ಫ್ಯಾನು, ಕೆಲ ಪೈಪಗಳು ಮುಂತಾದ ಹಳೆ ವಸ್ತುಗಳು ದೊರೆತವು. ಅವುಗಳನ್ನು ಹೊರತೆಗೆಯಲು ಬಹು ಕಷ್ಟವಾಯಿತು.

. ಕೈಯಲ್ಲಿ ಇಂತಹ ವಸ್ತುಗಳನ್ನು ಹಿಡಿದುಕೊಂಡು "ಟೋಂಗಾ!" ಎಂದು ಕೂಗುತ್ತ ಹಕ್ಕಿಗಳನ್ನು ಮತ್ತು ಜೇಡುಗಳನ್ನು ದೂರ ಸರಿಸಿ ಆತ ಮನೆಗೆ ಹೋಗುತ್ತಿದ್ದನು. ಈತನು ಇಂತಹ ಒಡೆದು ಹೋದ, ಮುರಿದು ಹೋದ ವಸ್ತುಗಳನ್ನು ಮನೆಗೆ ಒಯ್ಯುತ್ತಿದ್ದಾಗ ಹಾದಿಯಲ್ಲಿದ್ದವರು "ಇವನೊಬ್ಬ ಹುಚ್ಚ. ಹುಚ್ಚರೇ ಇಂಥ ಹಳೇ ವಸ್ತುಗಳನ್ನು ಕೂಡಿ ಹಾಕುವರು." ಎಂದು ಚೇಷ್ಟೆ ಮಾಡುತ್ತ ನಗೆದಾಡುತ್ತಿದ್ದರು





ಎಷ್ಟೋ ವಾರಗಳು ಕೆಲಸ ಮಾಡಿದ ಮೇಲೆ ಹರಕು ಮುರುಕು ಸಾಯಕಲ್ಲಿನ ಗಾಲಿಗಳಿಂದ, ಪ್ಲಾಸ್ಟಿಕ್ ಪೈಪುಗಳಿಂದ, ಸಾಯಕಲ್ಲಿನ ಹೆಡ್ ಲಾಯಿಟ್ ದಿಂದ ಅವನು ಒಂದು ಚಿಕ್ಕವಾದ ಜನರೇಟರನ್ನು ಮಾಡಲು ಯಶಸ್ವಿಯಾದನು.




ಮೂರು ದಿನವೀಡಿ ಸುತ್ತಿಗಯಿಂದ ಹೊಡೆಯುವ, ನಟ್-ಬೋಲ್ಟ್ ಗಳ ಸಪ್ಪಳಗಳನ್ನು ಕೇಳುತ್ತಿದ್ದ ನೆರೆಹೊರೆಯವರೆಲ್ಲ ಇವನ ತಲೆಯಲ್ಲಿಯ ಸ್ಕ್ರೂ ಸಡಿಲಾಗಿದೆ ಎಂದು ಸನ್ನೆ ಮಾಡುತ್ತಿದ್ದರು. ಸುತ್ತಲಿನ ಕೋಳಿ, ನಾಯಿ, ಬೆಕ್ಕುಗಳು ದನಿ ಮಾಡುತ್ತ ಅವನಿಂದ ದೂರವಿರುತ್ತಿದ್ದವು.






ಒಂದು ದಿನ ಅವನ ವಯಸ್ಸಿನ ಕಕ್ಕನ ಮಗ ಜಾಫರಿ ಮತ್ತು ಗೆಳೆಯ ಗಿಲ್ಬರ್ಟ ಅವನ ಹತ್ತಿರ ಬಂದರು. “ಈ ಗಾಳಿಯಂತ್ರ ನಮಗೆ ಉಪಯೋಗವಾಗಬಹುದೇ?” ಎಂದು ಅವನನ್ನು ಕೇಳಿದರು. ನೀವು ನನಗೆ ಒಂದಿಷ್ಟು ಸಹಾಯ ಮಾಡುವಿರಾ ಎಂದೆನ್ನುತ್ತ ಅವರ ಕೈಯಲ್ಲಿ ಕೊಡಲಿ ಕೊಟ್ಟು ಅವರನ್ನು ಆತ ಅಡವಿಗೆ ಕರೆದುಕೊಂಡು ಹೋದನು. ವಿಲಿಯಮ್ ಮತ್ತು ಅವರ ಸಂಗಡಿಗರು ಗಿಡಗಳನ್ನು ಕಡಿದು ಅದರ ಟೊಂಗೆಗಳಿಂದ ಒಂದು ಎತ್ತರವಾದ ಟಾವರನ್ನು ಕಟ್ಟಿದರು.



ವಿಲಿಯಮ್ ಮೇಲೆ ನಿಂತು “ಬೇಗನೆ
ಮೇಲೆ ತನ್ನಿ.” ಎಂದು ಕೂಗಿದನು.

ಸುತ್ತಲು ನೆರೆತ ಜನ ಈ ವಿಚಿತ್ರವಾದ ಯಂತ್ರವನ್ನು ನೋಡತೊಡಗಿದರು. ಜಿರಾಫದ ಗಂಟಲದಂತೆ ಇದು ಅಲುಗಾಡುತ್ತಿತ್ತು. ಕೆಲವರು ನಕ್ಕರು, ಕೆಲವರು ನಗೆದಾಡಿದರು, ಕೆಲವರು ಚೇಷ್ಟೆ ಮಾಡಿದರು. ಆದರೆ ವಿಲಿಯಮ್ ಬೀಸುವ ಗಾಳಿಗಾಗಿ ದಾರಿ ಕಾಯುತ್ತಿದ್ದ.




ಎಂದಿನಂತೆ ಗಾಳಿ ಬಂದು ಬಿಟ್ಟಿತು.


ಮೊದಲು ಮೆಲುಗಾಳಿ ಆ ಮೇಲೆ ರಭಸದ ಗಾಳಿ.
ಫ್ಯಾನಿನ ಬ್ಲೇಡಗಳು ನೋಡುನೋಡುವಷ್ಟರಲ್ಲಿ
ತಿರುಗತೊಡಗಿದವು.



ಕೆಲಸದಿಂದ ಹುಣ್ಣಾದ ಮತ್ತು ಹಸಿವೆ ಹಾಗು ಕತ್ತಲೆನಿಂದಾಗಿ ಬಳಲಿದ ಕೈಗಳಿಂದ ಆತ ವಾಯರಗಳನ್ನು ಬಲ್ಬಿಗೆ ಜೋಡಿಸಿದವು. ಮೊದಮೊದಲು ಮಂದವಾಗಿ ಬೆಳಕು ಕೊಡುವ ಬಲ್ಬು ಕೆಲ ಕ್ಷಣದಲ್ಲಿಯೇ ಝುಗ್ಗನೆ ಬೆಳಗಿತು. “ಟೋಂಗಾ!” ವಿಲಿಯಮ್ ಕೂಗಿದ, “ ನಾನು ವಿದ್ಯುತ್ ಗಾಳಿ ಮಾಡಿದೆ!”







"ಶಾಬ್ಬಾಸ್, ಒಳ್ಳೆಯ ಕೆಲಸ!" ಒಬ್ಬನು ಅಭಿನಂದಿಸಿದನು.ಎಲ್ಲ ಜನರು ಚಪ್ಪಾಳೆ ಬಾರಿಸಿದರು.

ಇನ್ನೂ ಸಾಕಷ್ಟು ಮಾಡಬೇಕಾಗಿದೆ. ಇದು ಬರಿ ಪ್ರಾರಂಭ ವಿಲಿಯಮ್ ನು ಅಂದುಕೊಂಡನು. ವಿದ್ಯುದ್ದೀಪಗಳು ಹೊಟ್ಟೆ ತುಂಬಲಾರವು.

'ಇನ್ನೊಂದು ಗಾಳಿಯಂತ್ರವು ಬಾವಿಯ ನೀರನ್ನು ಎತ್ತಿ ಒಣ ನೆಲವನ್ನು ಹಸಿಮಾಡಬಹುದು. ಹೊಟ್ಟೆಗಿಲ್ಲದವರಿಗೆ ಅನ್ನ ಕೊಡಬಹುದು. ವಿದ್ಯುತ್ ಗಾಳಿ ನನ್ನ ದೇಶಕ್ಕೇನೆ ಉಣ್ಣಿಸಬಹುದು.' ವಿಲಿಯಮ್ ವಿಚಾರ ಮಾಡತೊಡಗಿದನು.



ಇದೇ ಎಲ್ಲಕ್ಕಿಂತ ದೊಡ್ಡ ಬೆರಗಿನ ಸಂಗತಿ!





ವಿಲಿಯಮ್ ಕಂಕ್ವಾಂಬಾ 1987ರಲ್ಲಿ ಮಧ್ಯ ಮಾಲಾವಿಯ ವಿಂಬೆ ಎಂಬ ಹಳ್ಳಿಯಲ್ಲಿ ಜನಿಸಿದನು. ಸಹಾರಾ ಮರುಭೂಮಿಯ ಅಕ್ಕಪಕ್ಕದಲ್ಲಿರುವ ಆಫ್ರಿಕೆಯ ಇತರ ದೇಶಗಳಂತೆ ವಿಲಿಯಮ್ ನ ತಂದೆ ಟ್ರಾಯವೆಲ್ ಒಕ್ಕಲುತನ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದನು. ಇವರೆಲ್ಲ ಸಿಹಿ ಗೋವಿನ ಜೋಳದ ಬೆಳೆಯನ್ನು ಬೆಳೆಸಿ ಅದರಿಂದ ಮಾಡಿದ ಅಂಬಲಿಯನ್ನು ಕುಡಿದು ಹಸಿವು ನೀಗಿಸುತ್ತಿದ್ದರು. ಅರಿವೆ, ಔಷಧಿ, ಮತ್ತು ಇತರ ಮೇಲ್ಖರ್ಚಿಗಾಗಿ ಹೊಗೆಸೊಪ್ಪನ್ನು ಸ್ವಲ್ಪ ಪ್ರಮಾಣದಲ್ಲಿ ನೆಟ್ಟು ಅದರ ಉತ್ಪನ್ನವನ್ನು ಸಮೀಪದ ಪಟ್ಟಣದಲ್ಲಿ ಮಾರುತ್ತಿದ್ದರು. ಅವರ ಬೆಳೆಗಳೆಲ್ಲ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿದ್ದರಿಂದ ಮಳೆ, ಬೀಜ ಮತ್ತು ಗೊಬ್ಬರದಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಅವರಿಗೆ ಬಹಳ ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾಗುತ್ತಿತ್ತು. 2001-02ರಲ್ಲಿ ಇದೇ ಸಮಸ್ಯೆಯಿಂದ ಅವರಿಗೆ ಬರಗಾಲನ್ನು ಎದುರಿಸಬೇಕಾಯಿತು. ಇಡೀ ದೇಶದಲ್ಲಿ ತಿನ್ನಲು ಧಾನ್ಯವೇ ಇರಲಿಲ್ಲ. ಆದ್ದರಿಂದ ಎಲ್ಲರಿಗೂ ಉಪವಾಸ ಮಾಡಬೇಕಾಗುತ್ತಿತ್ತು. ವಿಲಿಯಮ್, ಆತನ ತಂದೆ-ತಾಯಿ, ಅವನ ಆರು ಅಕ್ಕ-ತಂಗೆಂದಿರು ಅನ್ನವಿಲ್ಲದೆ ಸೊರಗತೊಡಗಿದರು. ಒಮ್ಮೆಯಂತೂ ಅವನ ತಂದೆಗೆ ಆಹಾರವಿಲ್ಲದೆ ಕಣ್ಣುಗಳನ್ನು ಕಳೆದುಕೊಳ್ಳುವ ಸ್ಥಿತಿಯುಂಟಾಯಿತು. ಈ ಬರಗಾಲದಲ್ಲಿ ಮಾಲಾವಿಯ ಸಾವಿರಾರು ಜನರು ಮರಣಕ್ಕೆ ತುತ್ತಾದರು. ವಿಲಿಯಮ್ ತನ್ನ ಗಾಳಿಯಂತ್ರಕ್ಕಾಗಿ ಹಳೆದಾಯಿತೆಂದು ಕಸದಲ್ಲಿ ಒಗೆದ ಟ್ರ್ಯಾಕ್ಟರದಲ್ಲಿಯ ಫ್ಯಾನ್, ಶಾಕ್ ಅಬ್ಸಾರ್ಬರ್,ಗಾಲಿಗಳಿರದ ಸಾಯಕಲ್ ಫ್ರೆಮ್, ಮುಂತಾದವುಗಳನ್ನು ಕೂಡ ಹಾಕಿದನು. ಗಾಳಿಯಂತ್ರದ ಬ್ಲೇಡ್ ಗಳಿಗಾಗಿ ಹಳೆಯ ಪ್ಲಾಸ್ಟಿಕ್ ಪೈಪಗಳನ್ನು ಇಬ್ಭಾಗ ಮಾಡಿ ಒಲೆಯ ಮೇಲಿಟ್ಟು ಚಪ್ಪಟೆ ಮಾಡಿದನು. ಅವನ ಹಳ್ಳಿಯಲ್ಲಿಯ ಕೆಲ ಜನರು ಕತ್ತಲಲ್ಲಿ ಹೋಗುವಾಗ ಬೆಳಕಿಗೆಂದು ಸಾಯಕಲ್ ಗಾಲಿಗೆ ಬಾಟಲಿಯ ಆಕಾರದ ಡಾಯನ್ಯಾಮೋ ಕೂಡಿಸಿ ಚಿಕ್ಕ ಬಲ್ಬನ್ನು ಹಚ್ಚುತ್ತಿದ್ದರು.

ಇಂತಹ ಬಲ್ಬು ಮತ್ತು ಡಾಯನ್ಯಾಮೋ ಆತ ಉಪಯೋಗಿಸಿದನು. ಗಾಳಿ ಬಿಟ್ಟಾಗ ಫ್ಯಾನು ತಿರುಗುತ್ತಿತ್ತು. ಆ ಫ್ಯಾನಿಗೆ ಜೋಡಿಸಿದ ಡಾಯನ್ಯಾಮೋ ತಿರುಗಿ ಆ ಚಿಕ್ಕ ಬಲ್ಬು ಬೆಳಕು ಕೊಡತೊಡಗಿತು. ಈ ರೀತಿಯಾಗಿ ಆತನು ಗಾಳಿಯ ಸಹಾಯದಿಂದ ವಿದ್ಯುತ್ತನ್ನು ನಿರ್ಮಿಸಿದನು. ಆಗ ಆತನ ವಯಸ್ಸು 14 ವರುಷ. ಆ ಮೇಲೆ ಈ ಗಾಳಿಯಂತ್ರದಿಂದ ಕಾರಿನ ಬ್ಯಾಟರಿಯನ್ನು ಚಾರ್ಜ ಮಾಡಿ ನಾಲ್ಕಾರು ಬಲ್ಬುಗಳನ್ನು ಬೆಳಗಿಸಿದನು.



ಮುಂದೆ ಕೆಲ ದಿನಗಲಲ್ಲಿ ಆತನು ತನ್ನ 'ಹರಿತ್' ಯಂತ್ರವನ್ನು ತಯಾರಿಸಿ ಬಾವಿಯ ನೀರನ್ನು ಕೂಡ ಹೊರತಂದನು. ಆ ನೀರಿನಿಂದ ಇಡೀ ವರುಷ ಕಾಯಿಪಲ್ಲೆಗಳನ್ನು ಬೆಳೆಸಲು ಅನುಕೂಲವಾಯಿತು. 2007ರಲ್ಲಿ ಈತನ ಈ ಪ್ರಯೋಗಗಳ ಬಗ್ಗೆ ಸುದ್ದಿಗಾರರಿಗೆ ಗೊತ್ತಾದಾಗ ಟಾಂಝಾನಿಯಾದ TED ಸಮ್ಮೇಳನಕ್ಕೆಅವನನ್ನು ಕರೆಯಲಾಯಿತು. ಅವನು ಇಲ್ಲಿಯವರೆಗೆ ವಿಮಾನದಲ್ಲಿ ಕುಳಿತಿರಲಿಲ್ಲ. ಅವನಿಗೆ ಇಂಟರನೆಟ್ ಏನು ಎಂಬುದು ಗೊತ್ತಿರಲಿಲ್ಲ. ಈತನ ಕತೆ ಕೇಳಿ ಸಮ್ಮೇಳನದಲ್ಲಿಯ ಸಾಕಷ್ಟು ಜನರು ಅವನಿಗೆ ಶಾಲೆ ಕಲಿಯಲು ಸಹಾಯ ಮಾಡಿದರು. ಆ ಮೇಲೆ ಆತನು ತನ್ನ ಹೊಲಗಳಿಗಾಗಿ ಸೌರ ಶಕ್ತಿಯನ್ನು ಉಪಯೋಗಿಸಿ ಪಂಪುಗಳನ್ನು ನಡೆಯಿಸತೊಡಗಿದನು. ಮಳೆಯ ಮೇಲೆ ಅವಲಂಬಿಸದೆ ಈ ಸೌರ ಶಕ್ತಿಯಿಂದಾಗಿ ಅವನ ತಂದೆಯ ಹೊಲಗಳಿಗೆ ನೀರು ದೊರೆಯುತ್ತದೆ. ಈ ರೀತಿಯಾಗಿ ಅವನು ಹಸಿವಿನಿಂದ ಎಲ್ಲರನ್ನು ಪಾರುಮಾಡಿದನು. ವಿಲಿಯಮ್ ಈಗ ಅಮೇರಿಕೆಯಲ್ಲಿ ಇಂಜಿನಿಯರಿಂಗ ಪದವಿಗಾಗಿ ಕಲಿಯುತ್ತಿದ್ದಾನೆ. ಈ ಪದವಿ ಗಳಿಸಿದ ಮೇಲೆ ನವೀಕರಿಸುವ ಶಕ್ತಿಯನ್ನುಪೋಗಿಸಿ ವಿದ್ಯುತ್ತಿನ ನಿರ್ಮಿತಿ ಮಾಡಬೇಕೆಂಬುದು ಅವನ ಗುರಿ. ಮಾಲಾವಿಯ ಚಿಕ್ಕ ಹಳ್ಳಿಯಲ್ಲಿಯ ಜನರ ಹತ್ತಿರ ದೀಪ ಬೆಳಗಿಸಲು ಹಣವಿಲ್ಲದ್ದರಿಂದ ಸಂಜೆಯಾದ ಕೂಡಲೇ ಮಲಗಿ ಬಿಡುತ್ತಿದ್ದರು. ಆದರೆ ವಿಲಿಯಮ್ ಗೆ ಮಾತ್ರ ಈ ಕತ್ತಲೇ ಕನಸು ಕಾಣಲು ಅಡಿಗೊಳಿಸಿತು.